**ಸಾಕ್ಷಿಗೆ  ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ: 6 ನೇ ಎದುರುದಾರರ ಪರವಾಗಿ ಶ್ರೀ ಎಸ್.ಎ.ಪಿ ವಕೀಲರಿಂದಃ-**

ನಾನು ಹಾಜರು ಪಡಿಸಿದ ದಾಖಲೆಗಳಲ್ಲಿ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರವನ್ನು ನಿಡಿ-1 ಎಂದು ಮತ್ತು ವರ್ಗಾವಣೆ ಪ್ರಮಾಣ ಪತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು.

**ನ್ಯಾಯಾಲಯದ ಪ್ರಶ್ನೆಃ**

ಫಕೀರಪ್ಪ ನನ್ನ ತಂದೆ. ಫಕೀರಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಸದರಿ ಫಕೀಪ್ಪನಿಗೆ ಮಲ್ಲೇಶಪ್ಪ ಮತ್ತು ಭೀರಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ನಾನು ಹೆಣ್ಣು ಮಗಳು ಇದ್ದೇವೆ. ಮಲ್ಲೇಶಪ್ಪನಿಗೆ ಇಬ್ಬರು ಹೆಂಡತಿಯರು ಅವರು ತಾರಾಬಾಯಿ ಮತ್ತು ಶಾಂತಮ್ಮ. ತಾರಾಬಾಯಿರವರಿಗೆ ಉಮಾಕಾಂತ ಎಂಬ ಒಬ್ಬ ಮಗನಿದ್ದಾನೆ. ಶಾಂತಮ್ಮರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಭೀರಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಅವರು ಆಕಾಶ, ನರೇಶ ಹಾಗೂ ಗಂಗೊತ್ರಿ. ನನಗೆ ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು. ಅವರು ವಿನೋದ ಕುಮಾರ, ವಿಜಯಶಾಲಿನಿ ಹಾಗೂ ಸ್ನೇಹ.

ನನ್ನ ತಂದೆ ಫಕೀರಪ್ಪನಿಗೆ ಮೂರು ಜನ ಹೆಂಡತಿಯರು. ಅವರ ಹೆಸರು ಬಸಮ್ಮ, ಲಕ್ಷ್ಮಿಬಾಯಿ ಹಾಗೂ ಗೌರಮ್ಮ. ಸದರಿ ಫಕೀರಪ್ಪರವರು ಬಸಮ್ಮ ಮೃತಪಟ್ಟ ಮೇಲೆ ಲಕ್ಷ್ಮಿಬಾಯಿರವರು ಜೊತೆ ಮದುವೆಯಾಗಿದ್ದು ನಂತರ ಲಕ್ಷ್ಮೀಬಾಯಿರವರು ಮೃತಪಟ್ಟ ನಂತರ ಗೌರಮ್ಮರವರ ಜೊತೆ ಮದುವೆಯಾಗಿದ್ದಾರೆ. ಸದರಿ ಗೌರಮ್ಮ ಈಗ ಜೀವಂತ ಇದ್ದಾರೆ. ಫಕೀರಪ್ಪನಿಗೆ ಬಸಮ್ಮರವರಿಂದ ರಾಯಪ್ಪ ಎಂಬ ಒಬ್ಬ ಮಗನಿದ್ದಾಗನೆ. ಫಕೀರಪ್ಪನಿಗೆ ಲಕ್ಷ್ಮೀಬಾಯಿರವರಿಂದ ಮಕ್ಕಳು ಇರುವುದಿಲ್ಲ. ದಾವಾ ಜಮೀನುಗಳಲ್ಲಿರುವ ಹೂವಿನಹಳ್ಳಿಯಲ್ಲಿರುವ ಮನೆಗಳು ನನ್ನ ತಂದೆ ಖರೀದಿ ಮಾಡಿದ್ದಾರೆ. ಸ.ನಂ. 48/2, 33/1, 76, 31, 58/3 ರ ಜಮೀನು ನನ್ನ ತಂದೆ ಖರೀದಿ ಮಾಡಿರುತ್ತಾರೆ. ಸ.ನಂ. 34/1 ರ ಜಮೀನು ನನ್ನ ಅಜ್ಜ ಭೀರಪ್ಪರವರು ಖರೀದಿ ಮಾಡಿದ್ದರು. ಮೇಲೆ ಹೇಳಿರುವ ಜಮೀನು ಬಿಟ್ಟು ಬೇರೆ ಯಾವುದೇ ಆಸ್ತಿಗಳು ನನ್ನ ತಂದೆ ಅಥವಾ ಅಜ್ಜನಿಗೆ ಸೇರಿರುವುದಿಲ್ಲ. ನನ್ನ ಹಾಗೂ ಉಳಿದ ಎದುರುದಾರರು ಹಾಗೂ ಅರ್ಜಿದಾರನ ಮಧ್ಯ ಪಾಲು ಆಗಿರುವುದಿಲ್ಲ.

**ಪಾಟೀ ಸವಾಲು ಅರ್ಜಿದಾರರ ಪರವಾಗಿ ಶ್ರೀ ಎಮ್.ಎಸ್.ಎಸ್. ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**